# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ.

ಈ.ಪಿ ನಂಃ 71/09

ಆರ್.ಡಬ್ಲೂಃ 2

| | | |
|---|---|---|
| ಸಾಕ್ಷಿದಾರರ ಹೆಸರು | ಃಃ | ಎನ್.ಆರ್.ರಾಮಪ್ಪ |
| ತಂದೆಯ ಹೆಸರು | ಃಃ | ರಾಜಪ್ಪ |
| ವಯಸ್ಸು | ಃಃ | 45 ವರ್ಷ |
| ಉದ್ಯೋಗ | ಃಃ | ಮುಖ್ಯ ಪೇದೆ, 215 , ಹರಿಹರ ನಗರ ಪೋಲಿಸ್ ಠಾಣೆ. |
| ವಾಸ ಸ್ಥಳ | ಃಃ | ಹರಿಹರ. |

ದಿನಾಂಕಃ 04.03.2017 ರಂದು ಪ್ರಮಾಣೀಕರಿಸಲಾಯಿತು.

ಃಃಡಿಕ್ರಿದಾರಕರ ಪರ ವಕೀಲರಾದ ಶ್ರೀ ಬಿ.ಎಚ್ ವಕೀಲರಿಂದ ಮುಖ್ಯ ವಿಚಾರಣೆ ಃಃ

ಈ ಪ್ರಕರಣದಲ್ಲಿ ಹಾಜರಾಗಿ ಸಾಕ್ಷಿ ನುಡಿಯುವ ಸಲುವಾಗಿ ನನಗೆ ಸಾಕ್ಷಿ ಸಮನ್ಸ್ ಬಂದಿರುತ್ತದೆ. ಕಳೆದ 5 ವರ್ಷಗಳಿಂದ ನಾನು ಮೇಲ್ಕಂಡ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನ್ಯಾಯಾಲಯದ ಆದೇಶದ ಮೇರೆಗೆ ಸಂಬಂದಪಟ್ಟ ಕಕ್ಷಿಗಾರರಿಗೆ ಡೆಲಿವರಿ ವಾರಂಟ್‌ನ್ನು ಜಾರಿ ಮಾಡುವ ಹಿನ್ನೆಲೆಯಲ್ಲಿ ನನ್ನಿಂದ ರಕ್ಷಣೆ ನೀಡಲಾಗಿತ್ತು. ಈಗ ನಾನು ಡೆಲಿವರಿ ವಾರಂಟ್ ನೋಡುತ್ತಿದ್ದೇನೆ. ಅದನ್ನು ನಿಪಿ-41 ಎಂದು ಗುರ್ತಿಸಲಾಯಿತು. ಅದಕ್ಕೆ ನನ್ನ ಸಹಿ ಇದ್ದು ನೋಡಿ ಗುರ್ತಿಸುತ್ತಿದ್ದೇನೆ. ಅದನ್ನು ನಿಪಿ-41(ಎ) ಎಂದು ಗುರ್ತಿಸಲಾಯಿತು. ಈಗ ಸಾಕ್ಷಿದಾರರು ನಿಸಿ-1 ನೋಡುತ್ತಿದ್ದು ಅದಕ್ಕೆ ತಮ್ಮ ಸಹಿ ಇರುವುದನ್ನು ನೋಡಿ ಗುರ್ತಿಸಿರುವುದರಿಂದ ಅವರ ಸಹಿಯನ್ನು ನಿಸಿ-1(ಎ) ಎಂದು ಗುರ್ತಿಸಲಾಯಿತು. ನಿಸಿ-1 ದಾಖಲೆಯನ್ನು ಈ ನ್ಯಾಯಾಲಯದ ಅಮೀನರಾದ ಓಂಕಾರಪ್ಪ ಬರೆದಿರುತ್ತಾರೆ. ದಾವಾ ಸ್ವತ್ತನ್ನು ವಶಕ್ಕೆ ಪಡೆದದುಕೊಂಡ ಹಿನ್ನೆಲೆಯಲ್ಲಿ ಡಿಕ್ರಿದಾರಕಳಾದ ಹಾಲಮ್ಮ ಸಹಿ ಮಾಡಿದ್ದು, ಅವಳ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿರುವುದರಿಂದ ಅದನ್ನು ನಿಸಿ-1(ಬಿ)

ಎಂದು ಗುರ್ತಿಸಲಾಯಿತು. ಆ ದಿವಸ ಸ್ಥಳಕ್ಕೆ ನನ್ನ ಜೊತೆ ನಮ್ಮ ಠಾಣೆಯ ಶ್ರೀಮತಿ ಲಲಿತಮ್ಮ ಎಂಬ ಹೆಸರಿನ ಮಹಿಳಾ ಮುಖ್ಯ ಪೇದೆ ಹಾಜರಿದ್ದು ಅವರು ಕೂಡ ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ. ಅವರ ಸಹಿಯನ್ನು ನೋಡಿ ಸಾಕ್ಷಿದಾರರು ಗುರ್ತಿಸಿರುವುದರಿಂದ ಅದನ್ನು ನಿಸಿ-1(ಸಿ) ಎಂದು ಗುರ್ತಿಸಲಾಯಿತು.

2. ದಾವಾ ಜಮೀನನ್ನು ಅಳತೆ ಮಾಡಲು ಆ ದಿವಸ ಶ್ರೀನಿವಾಸ ಎಂಬ ಹೆಸರಿನ ಸರ್ವೆಯರ್ ಬಂದಿದ್ದರು. ಅದಕ್ಕೆ ಅವರ ಸಹಿ ಇದ್ದು ಆ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿರುವುದರಿಂದ ಅದನ್ನು ನಿಸಿ-1(ಡಿ) ಎಂದು ಗುರ್ತಿಸಲಾಯಿತು.

ಈ ಸಮಯದಲ್ಲಿ ತಕರಾರುದಾರ ನಂ 1 ಪರ ವಕೀಲರಾದ ಶ್ರೀ ಎಸ್.ಕೆ ಇವರ ವತಿಯಿಂದ ಶ್ರೀ ಬಿ.ಸಿ.ಬಿ ಇವರು ಹಾಜರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಪಾಟೀ ಸವಾಲನ್ನು ಮೂಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.